ದಿನಾಂಕ 18.07.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 1 ಮತ್ತು 4 ನೇ ಪ್ರತಿವಾದಿ ಪರ ಶ್ರೀ. ಎ.ಎಸ್.ಕೆ ವಕೀಲರಿಂದಃ

5. ಪುಂಜಾಲಕಟ್ಟೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಖಾತೆ ಇತ್ತು. ಈಗ ಅದು ಕೆನರಾ ಬ್ಯಾಂಕ್ ಆಗಿರುತ್ತದೆ. ಅಲ್ಲಿ ನನ್ನ ಹೆಸರಿನಲ್ಲಿ 1 ಲಕ್ಷ ರೂಪಾಯಿಯ ಡೆಪೊಸಿಟ್ ಇತ್ತು ಎಂದರೆ ಗೊತ್ತಿಲ್ಲ. ಆ ಡೆಪೊಸಿಟ್ ಹಣವನ್ನು ನಾನು ತೆಗೆದಿದ್ದೇನೆ ಎಂದರೆ ಸರಿಯಲ್ಲ. ಆ ಡೆಪೊಸಿಟ್‌ನ ಹಣವನ್ನು ಪಡೆದ ಬಗ್ಗೆ ದಾಖಲೆಗಳನ್ನು ಬ್ಯಾಂಕಿನಿಂದ ತರಿಸಲು ನಿಮ್ಮದು ಆಕ್ಷೇಪ ಇದೆಯಾ ಎಂದರೆ ಇಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯಚೀಟಿ ಮಾಡುವಾಗ ನನ್ನ ಹೆಸರಿನಲ್ಲಿ 1 ಲಕ್ಷ ರೂಪಾಯಿಗಳನ್ನು ಪುಂಜಾಲಕಟ್ಟೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಡೆಪೊಸಿಟ್ ಮಾಡಲಾಗಿತ್ತು ಅದರ ಡೆಪೊಸಿಟ್ ಸಂಃ 665049 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ 18 ವರ್ಷ ತುಂಬಿದ ನಂತರ ಆ ಹಣವನ್ನು ನಾನೇ ಪಡೆದುಕೊಳ್ಳಬೇಕು ಎಂಬ ಷರತ್ತು ಸಹ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನಗೆ 18 ವರ್ಷ ಪ್ರಾಯ ತುಂಬಿದ ನಂತರ ಆ ಹಣವನ್ನು ಪಡೆದುಕೊಂಡು ಕ್ರಯಚೀಟಿಗೆ ಒಪ್ಪಿಗೆಯನ್ನು ಸಹ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ತಾಯಿ ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ಎಷ್ಟು ದಾವೆ ದಾಖಲಿಸಿದ್ದಾರೆ ಎಂದು ಗೊತ್ತಿಲ್ಲ. ಜಾಗವನ್ನು ಕುಟುಂಬದ ಸಮಷ್ಟಿ ಹಕ್ಕುದಾರರು ಸೇರಿ ಮಾರಾಟ ಮಾಡಲು ತೀರ್ಮಾನ ಮಾಡಿದ್ದೆವು ಎಂದರೆ ಗೊತ್ತಿಲ್ಲ. ಮೊದಲು ದಾವಾ ಸ್ವತ್ತಿನ ಸ್ವಾದೀನ ನನ್ನ ತಂದೆಯವರ ಹತ್ತಿರ ಇತ್ತು, ನಿಮ್ಮ ತಂದೆಯವರ ಹತ್ತಿರ ಎಷ್ಟು ಜಾಗ ಸ್ವಾದೀನದಲ್ಲಿತ್ತು ಎಂದರೆ ಸಾಕ್ಷಿ 5 ಎಕರೆ ಇತ್ತು ಎಂದು ಹೇಳುತ್ತಾರೆ. ಆ ಜಾಗಕ್ಕೆ ಎಷ್ಟು ಜನ ಹಕ್ಕುದಾರರು ಇದ್ದರು ಎಂದು ಗೊತ್ತಾ ಎಂದರೆ ಸಾಕ್ಷಿ 5 ಮಂದಿ ಎಂದು ಹೇಳುತ್ತಾರೆ. ಆ 5 ಜನಕ್ಕೂ ಸ್ವಲ್ಪ ಸ್ವಲ್ಪ ಜಾಗ ಸ್ವಾದೀನದಲ್ಲಿತ್ತು ಎಂದರೆ ಹೌದು. ನನ್ನ ತಂದೆಯವರು 1998 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಯವರು ತೀರಿದ ನಂತರ ನನ್ನ ತಾಯಿಯವರು ಜಾಗದಲ್ಲಿ ಕೃಷಿ ಮಾಡುತ್ತಿರಲಿಲ್ಲ. ನಾನು ಮತ್ತು ನನ್ನ ತಾಯಿಯವರು ಪುಂಜಾಲಕಟ್ಟೆ ಜಾಗದಲ್ಲೆ ವಾಸವಿದ್ದೆವು. ತಂದೆ ತೀರಿದ ನಂತರ ಯಾರೂ ಸಹ ಕೃಷಿ ಮಾಡುತ್ತಿರಲಿಲ್ಲ ಹಾಗೂ ಉತ್ಪತ್ತಿ ಇರಲಿಲ್ಲ. ನಿಮ್ಮ ಜೀವನ ಹಾಗೂ ವಿದ್ಯಾಭ್ಯಾಸಕ್ಕೆ ಏನು ವ್ಯವಸ್ಥೆ ಇತ್ತು ಎಂದರೆ ಸಾಕ್ಷಿ

ಮಾವನವರು ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ನನಗೆ ಮತ್ತು ನನ್ನ ಸಹೋದರಿನಿಗೆ ವಿದ್ಯಾಭ್ಯಾಸ ಕೊಡಲು ನನ್ನ ತಾಯಿಯ ಹತ್ತಿರ ಯಾವುದೇ ಆರ್ಥಿಕ ಮೂಲ ಇಲ್ಲದ ಕಾರಣ ಸಮಷ್ಟಿ ಹಕ್ಕಿನ ಹಕ್ಕುದಾರರು ಸೇರಿ ಜಾಗವನ್ನು ಮಾರಾಟ ಮಾಡಬೇಕೆಂದು ತೀರ್ಮಾನ ಮಾಡಿದ್ದೆವು ಎಂದರೆ ಸರಿಯಲ್ಲ. ಅಲ್ಲದೆ ಜಾಗವನ್ನು ಪಾಲು ಮಾಡಿಕೊಂಡರೆ ಎಲ್ಲರಿಗೂ ಸಣ್ಣ ಪ್ರಮಾಣ ಜಾಗ ಸಿಗುತ್ತದೆ ಎಂಬ ಕಾರಣದಿಂದಲೂ ಸಹ ಜಾಗವನ್ನು ಮಾರಾಟ ಮಾಡಲು ತೀರ್ಮಾನಿಸಿದ್ದೆವು ಎಂದರೆ ಹೌದು.

7. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಗೆ ಯಾವಾಗ ಕ್ರಯಚೀಟಿಯಾಗಿದೆ ಎಂದು ನನಗೆ ಗೊತ್ತಿಲ್ಲ. ಎಷ್ಟು ವರ್ಷಗಳಿಂದ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾದೀನದಲ್ಲಿದ್ದಾರೆ ಎಂದರೆ ಸಾಕ್ಷಿ 2012 ರಿಂದ ಇದ್ದಾರೆ ಎಂದು ಹೇಳುತ್ತಾರೆ. ಜಾಗವನ್ನು ಒಮ್ಮತದಿಂದ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ 1 ನೇ ಪ್ರತಿವಾದಿಯಿಂದ ಹೆಚ್ಚಿನ ಹಣವನ್ನು ವಸೂಲಿ ಮಾಡಿ ದುರ್ಲಾಭ ಪಡೆಯುವ ಉದ್ದೇಶದಿಂದ ನಾನು ಮತ್ತು ನನ್ನ ತಾಯಿ ಸೇರಿಕೊಂಡು ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿನಲ್ಲಿ ದಾವೆ ದಾಖಲು ಮಾಡಿದರೆ ಆಗುವುದಿಲ್ಲ ಎಂದು ನನ್ನ ಮಾವ ನನ್ನ ಹೆಸರಿನಲ್ಲಿ ದಾವೆ ದಾಖಲು ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಾವನನ್ನು ಯಾವುದೇ ನ್ಯಾಯಾಲಯ ನನ್ನ ಪರವಾಗಿ ಗಾರ್ಡಿಯನ್ ಆಗಿ ನೇಮಕ ಮಾಡಿರುವುದಿಲ್ಲ. ಸತ್ಯ ವಿಚಾರಗಳನ್ನು ಮುಚ್ಚಿಟ್ಟು ಆರ್ಥಿಕ ದುರ್ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಈ ದಾವೆಯಲ್ಲಿ ಕೇಳಿರುವ ಯಾವುದೇ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

(3 ನೇ ಪ್ರತಿವಾದಿ ಪರ ವಕೀಲರು 1 ಮತ್ತು 4 ನೇ ಪ್ರತಿವಾದಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)

(7 ನೇ ಪ್ರತಿವಾದಿ ಪರ ವಕೀಲರು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು

(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ